ಇ) ಅವರ ಆಸ್ತಿಗಳ ಬಗ್ಗೆ ಪ್ರತಿವರ್ಷ ಘೋಷಣೆ ಮಾಡಿದ್ದಾರೆಯೇ ?

ಈ) ಅವರಿಂಗಳ ಸಂಖ್ಯೆಗಿಂತ ಸಮಜಾಯಿಷಿ ಕೊಡದಿರುವಷ್ಟು ಆಸ್ತಿಗಳನ್ನು ಮಾಡಿದ್ದಲ್ಲಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಸಂಸದೀಯ ವ್ಯವಹಾರ, ನಾಗರೀಕ ಸರಬರಾಜು ಮತ್ತು ಆಹಾರ ಮಂತ್ರಿಗಳು).—

ಅ) ಪಿ ಡಬ್ಲ್ಯೂ. ಡಿ. ಅಧಿಕಾರಿಗಳು — ೭
ಟೌನ್ ಪ್ಲಾನಿಂಗ್ ಅಧಿಕಾರಿಗಳು — ೧

ಆ) ಸದ್ಯದಲ್ಲಿ ಮಾಹಿತಿಯು ಇರುವುದಿಲ್ಲ. ಆದನ್ನು ಪಡೆದು ಒದಗಿಸಲಾಗುವುದು.

ಇ) ನಿಯಮದ ಪ್ರಕಾರ ಸಂಬಂಧಪಟ್ಟವರಿಗೆ ಪ್ರತಿವರ್ಷವೂ ಘೋಷಣೆ ಮಾಡಿರುತ್ತಾರೆ.

ಈ) ಸಮಂಜಾಯಿಷಿ ಕೊಡದಿರುವಷ್ಟು ಆಸ್ತಿಗಳನ್ನು ಮಾಡುವುದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೆ ನಿಯಮದ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. ಮತ್ತು ಅಥವಾ ಇಲಾಖಾ ವಿಚಾರಣೆಯನ್ನೂ ಸಹ ಮಾಡಲಾಗುವುದು.

ಹುಮನಾಬಾದ್ ಪಟ್ಟಣಕ್ಕೆ ನೀರಿನ ತೊಂದರೆಯ ಕುರಿತು.

೧೯೭೩. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ನಗರಾಭಿವೃದ್ಧಿ ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಮನಾಬಾದ್ ನಗರಕ್ಕೆ ನೀರಿನ ತೊಂದರೆ ಇದ್ದದ್ದಕ್ಕಾಗಿ ಸರ್ಕಾರದವರು ಹೊಸದಾಗಿ ಮೇಲ್ಮಟ್ಟದ ತೊಟ್ಟಿ ಮತ್ತು ಹೊಸದಾಗಿ ಬಾವಿ ಮಂಜೂರು ಮಾಡಿರುವುದು ನಿಜವೇ ಹಾಗಿದ್ದಲ್ಲಿ ಯಾವಾಗ ?

ಆ) ಅವು ಇನ್ನೂ ಪೂರ್ತಿಗೊಳಿಸದೇ ಇರುವುದಕ್ಕೆ ಕಾರಣಗಳೇನು ?

ಇ) ನಗರ ಸಭೆಯವರು ನೀರಿನ ತೊಟ್ಟಿಯಿಂದ ತೇರು ಮೈದಾನದವರೆಗೆ ಸಿಮೆಂಟ್ ಕೊಳವೆಯನ್ನು ತೆಗೆದು ಲೋಹದ ಕೊಳವೆ ಹಾಕಲು ಎಂಬತ್ತು ಸಾವಿರ ರೂಪಾಯಿಗಳನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ತುಂಬಿದ್ದು ನಿಜವೇ, ಹಾಗಿದ್ದಲ್ಲಿ ಇನ್ನೂ ಆ ಕೆಲಸ ಆಗದೆ ಇರುವುದಕ್ಕೆ ಕಾರಣಗಳೇನು ?

ಈ) ಸಾರ್ವಜನಿಕ ಹಿತದೃಷ್ಟಿಯಿಂದ ತೀವ್ರ ಕ್ರಮ ತೆಗೆದುಕೊಂಡು ಕೆಲಸ ಮುಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಮತ್ತು ಆಹಾರ ಸಚಿವರು).—

ಅ) ನಿಜ, ದಿನಾಂಕ ೭-೨-೧೯೮೧.

ಆ) ಈಗ ಎಲ್ಲಾ ಯೋಜಿಸಿದ ಕೆಲಸಗಳು ೧೧.೪೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

ಇ) ನಿಜ. ಆರ್. ಸಿ. ಸಿ. ಪೈಪ್ ಬದಲಾಗಿ ೩೦೦ ಮೀ. ಮೀ. ವ್ಯಾಸದ ೧೬೫ ಮೀಟರ್ ಉದ್ದದ ಬೀಡು ಕಬ್ಬಿಣದ ಕೊಳವೆಗಳನ್ನು ಮೇಲ್ಮಟ್ಟದ ಜಲಸಂಗ್ರಹಾಗಾರದಿಂದ ನೀರನ್ನು ಬಿಟ್ಟಾಗ ಈಗ ಹಾಳಿ ಇರುವ ಆರ್ ಸಿ. ಸಿ. ಪೈಪ್‌ಗಳು ಒಡೆದು ಹೋದರೆ ಬದಲಾಯಿಸಬೇಕಾಗುವುದೆಂದು ೮೪,೫೮೫.೦೦ ರೂ.ಗಳಿಗೆ ಏರಿದಿಸಲಾಯಿತು. ಆದರೆ ಜಲಸಂಗ್ರಹಾಗಾರವನ್ನು ದಿನಾಂಕ ೮-೩-೧೯೮೭ ರಂದು ಚಾಲ್ತಿಗೊಳಿಸಿದಾಗ ಆರ್. ಸಿ. ಸಿ. ಪೈಪುಗಳನ್ನು ಈವರೆಗೂ ಉಪಯೋಗಿಸಿಲ್ಲ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ.

ಈ) ಸಾರ್ವಜನಿಕರಿಗೆ ಯಾವ ತೊಂದರೆಯಾಗದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಎನ್. ಆರ್. ಡಬ್ಲ್ಯೂ. ಎಸ್, ಯೋಜನೆ.

೨೦೯೬. ಶ್ರೀ ಬಿ. ಎಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ೧೯೮೫-೮೬ ರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಎನ್ ಆರ್ ಡಬ್ಲ್ಯೂ ಎಸ್ ಅಡಿಯಲ್ಲಿ ಮಂಜೂರಾದ ಹಳ್ಳಿಗಳು ಯಾವುವು ?

೨ ಮಿನಿವಾಟರ್ ಸರಬರಾಜು ಯೋಜನೆ ಮೇರೆಗೆ ಮಂಜೂರಾದ ಗ್ರಾಮಂಗಳು ಯಾವುವು ?

೩ ಅವುಗಳಲ್ಲಿ ಎಷ್ಟು ಕೆಲಸಗಳು ನಡೆಯುತ್ತಿವೆ ? ಹಾಗೂ ಎಷ್ಟು ಪೂರ್ಣಗೊಂಡಿವೆ ?

ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

೧ ೧) ಅರಸನಾಳು ೨) ಕದಿಬತ್ತಳ್ಳಿ

೨ ೧೯೮೫-೮೬ನೇ ಸಾಲಿನಲ್ಲಿ ಈ ಕೆಳಕಂಡ ಹನ್ನೊಂದು ಗ್ರಾಮಗಳಿಗೆ ಮಿನಿವಾಟರ್ ಸಪ್ಲೈ ಸ್ಕೀಂಗಳು ವಿವಿದ ಕಾರ್ಯಕ್ರಮಗಳಲ್ಲಿ ಮಂಜೂರಾಗಿವೆ.

ರಾಜ್ಯ ಘಟಕ :

---

೧) ನಿಟ್ಟೂರು, ೨) ಅರಸನಾಳು ೩) ರಾಗಿಮಂಲಸವಾಡ ೪) ಕಾವಲಹಳ್ಳಿ ೫) ಬೆಂಡಿಗೆರೆ ದೊಡಕಾಂಡ ೬) ಅಣಜಿಗೆರೆ.

ಕೇಂದ್ರ ಘಟಕ :

---

೧) ಕಡಬಗೆರೆ ೨) ಬಾಳಿಗನೂರು ೩) ಹಗರಿಗಜಾಪುರ

ಬರಪರಿಹಾರ :

---

೧) ಗೌರಿಹಳ್ಳಿ ೨) ಕೋಲಹಳ್ಳಿ

೩ ೧) ಎರಡು ಎನ್ ಆರ್ ಡಬ್ಲ್ಯೂ ಎಸ್ ಯೋಜನೆಗಳು ಪ್ರಗತಿಯಲ್ಲಿವೆ.

೨) ಎಲ್ಲಾ ಹನ್ನೊಂದು ಮಿನಿವಾಟರ್ ಸಪ್ಲೈ ಸ್ಕೀಂಗಳು ಕೆಲಸ ಪೂರ್ಣಗೊಂಡಿದ್ದು ನೀರನ್ನು ಒದಗಿಸಲಾಗುತ್ತಿದೆ.

ಮಾಗಡಿ ತಾಲ್ಲೂಕಿನಲ್ಲಿ ಕಿರು ನೀರು ಸರಬರಾಜು ಯೋಜನೆ

೧೭೯೮ ಶ್ರೀ ಹೆಚ್.ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೧. ಮಾಗಡಿ ತಾಲ್ಲೂಕಿನಲ್ಲಿ ಕಿರು ನೀರು ಸರಬರಾಜು ಯೋಜನೆ ಪತಿಯಿಂದ ಎಷ್ಟು ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ?

೨. ಕೊಳವೆ ಮಂಲಕ ನೀರು ಸರಬರಾಜಿಗಾಗಿ ಎಷ್ಟು ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ?

೩. ಅವುಗಳ ಪೈಕಿ ಎಷ್ಟು ಹಳ್ಳಿಗಳಿಗೆ ಪೂರ್ತಿಯಾಗಿ ನೀರು ಸರಬರಾಜು ಮಾಡಲಾಗಿದೆ? ಉಳಿದ ಹಳ್ಳಿಗಳಿಗೆ ಕೊಡದಿರಲು ಕಾರಣವೇನು?